36	ಹೊರೆಯಾಳ ಗ್ರಾಮ, ಬೇಗೂರು ಅಂಚೆ, ಗುಂಡ್ಲುಪೇಟೆ ತಾ: ಮೈಸೂರು ಜಿಲ್ಲೆ.
37	ಗಡಿಗವಾರಪಲ್ಲಿ (ತಿರುಮಲಾಪುರ) ಚಿಂತಾಮಣಿ ತಾ: ಕೋಲಾರ ಜಿಲ್ಲೆ.
38	ಸೋಮಯಾಜಲಪಲ್ಲಿ, ಶ್ರೀನಿವಾಸಪುರ ತಾ: ಕೋಲಾರ ಜಿಲ್ಲೆ.
39	ಕಾರಿಗನೂರು, ಚನ್ನಗಿರಿ ತಾ: ಶಿವಮೊಗ್ಗ ಜಿಲ್ಲೆ.

ಅಂಗವಿಕಲರ ಅಭಿವೃದ್ಧಿ ನಿಗಮ ಸ್ಥಾಪನೆ

885 (400) ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲರ ಅಭಿವೃದ್ಧಿಗಾಗಿ ಪ್ರತ್ಯೇಕ ಅಂಗವಿಕಲರ ಅಭಿವೃದ್ಧಿ ನಿಗಮ, ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಇಂತಹ ನಿಗಮಕ್ಕೆ ವಹಿಸಬಹುದಾದ ಜವಾಬ್ದಾರಿಗಳೇನು?

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಸರ್ಕಾರದಿಂದ ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳಲ್ಲೂ ಶೇ.3ರ ಮೀಸಲಾತಿ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಶೇ.5ರ ಮೀಸಲಾತಿಯನ್ನು ಅಂಗವಿಕಲರಿಗೆ ನೀಡುವ ಬಗ್ಗೆ ಆದೇಶವಿದ್ದರೂ ಎಷ್ಟು ಜಿಲ್ಲೆಗಳಲ್ಲಿ ಈ ನಿರ್ದೇಶನಗಳನ್ನು ಪಾಲಿಸಿರುವುದಿಲ್ಲ (ಜಿಲ್ಲಾವಾರು ವಿವರ ನೀಡುವುದು)

ಇ) ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು 2001ರಲ್ಲಿಯೇ ಅನುಮತಿ ನೀಡಿದ್ದರೂ ಅಂಗವಿಕಲರೊಬ್ಬರಿಗೆ ಹಂಗಾಮಿ ನೇಮಕಾತಿ ಅವಕಾಶ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂತಹ ಅಂಗವಿಲಕರಿಗೆ ನೀಡಬಹುದಾದ ಪರಿಹಾರ ಗಳೇನು? (ವಿವರ ಒದಗಿಸುವುದು);

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಸರ್ಕಾರದಿಂದ ಹಾಗೂ ಸ್ಥಳೀಯ ಸಂಸ್ಥೆಗಳು, ಪಂಚಾಯತ್, ಪುರಸಭೆ,

ನಗರಸಭೆ, ನಿಗಮ/ಮಂಡಳಿಗಳಲ್ಲಿ ಕೈಗೊಳ್ಳುವ ಎಲ್ಲಾ ಬಡತನ ನಿರ್ಮೂಲನಾ ಕಾರ್ಯಕ್ರಮಗಳಲ್ಲೂ ಶೇ.3ರ ಮೀಸಲಾತಿಯನ್ನು ಒದಗಿಸಲು ದಿ: 09.11.2006 ರಂದು ಸರ್ಕಾರದಿಂದ ಅಧಿಸೂಚನೆಯನ್ನು ಹೊರಡಿಸ ಲಾಗಿದೆ. ಅದರಂತೆ ಸಂಬಂಧಿಸಿದ ಇಲಾಖೆಗಳು ಕಟ್ಟುನಿಟ್ಟಾಗಿ ನಿಯಮವನ್ನು ಪಾಲಿಸಲು ಸೂಚಿಸಲಾಗಿದೆ.

ಸರ್ಕಾರಿ ಹುದ್ದೆಗಳಲ್ಲಿ ಅಂಗವಿಕಲರಿಗೆ ಶೇ.5 ರಷ್ಟು ಮೀಸಲಾತಿ ಯನ್ನು ಆಯಾ ಇಲಾಖೆಗಳು ನೇಮಕಾತಿ ಮಾಡುವಾಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಿಯಮಗಳಂತೆ ಸಂಬಂಧಿಸಿದ ಎಲ್ಲಾ ಇಲಾಖೆಗಳು ಕ್ರಮ ಕೈಗೊಳ್ಳುತ್ತಿವೆ.

ಇ) ಕಂದಾಯ ಇಲಾಖೆಯು ನೀಡಿರುವ ಮಾಹಿತಿಯಂತೆ ಶ್ರೀ ಸೋಮಶೇಖರ್ ಬಿನ್ ಶಿವಯೋಗಪ್ಪ ಎಂಬುವವರು ದಿನಾಂಕ: 06–06–2001ರಂದು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಲ್ಲಿ ಮನವಿ ಸಲ್ಲಿಸಿ ತಾವು ಸ್ನಾತಕೋತ್ತರ ಪದವೀಧರ ಹಾಗೂ ಅಂಧರಾಗಿದ್ದು ದೂರವಾಣಿ ಪಿ.ಬಿ.ಎಕ್ಸ್ ಬೋರ್ಡ್ ನಿರ್ವಹಣೆಯ ತರಬೇತಿಯನ್ನು ಪಡೆದಿರುವುದರಿಂದ ತಮಗೆ ಆಪರೇಟರ್ ಹುದ್ದೆಯನ್ನು ನೀಡಬೇಕೆಂದು ಕೋರಿದ್ದರು. ಮಾನವೀಯತೆ ದೃಷ್ಟಿಯಿಂದ ಹಾಗೂ ಅಂಧ ಅಭ್ಯರ್ಥಿಗೆ ಸಹಾಯವಾಗುವ ನಿಟ್ಟಿನಲ್ಲಿ ಇವರ ಮನವಿಯನ್ನು ದಿನಾಂಕ: 29–06–2001 ರಂದು ಕಂದಾಯ ಇಲಾಖೆಗೆ ಸಲ್ಲಿಸಲಾಗಿತ್ತು.

ಸರ್ಕಾರದ ಪತ್ರ ಸಂಖ್ಯೆ: ಕಂಇ 249 ಎಂವಿಎಸ್ 2001, ದಿನಾಂಕ: 23–10–2001ರಲ್ಲಿ ಸದರಿ ಅಭ್ಯರ್ಥಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು, ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶವನ್ನು ಗಮನದಲ್ಲಿಟ್ಟುಕೊಂಡು ನೇಮಕಾತಿ ಮಾಡಿಕೊಳ್ಳಬೇಕೆಂದು ನಿರ್ದೇಶಿಸಿದ್ದರು. ಈ ನಿರ್ದೇಶನದ ಅನುಸಾರ ಕೆ.ಸಿ.ಎಸ್.ಆರ್. (ಸಾಮಾನ್ಯ ನೇಮಕಾತಿ) 1977ರ ನಿಯಮ 9ರನ್ವಯ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ನೇಮಕಾತಿ ನಿಯಮದಡಿ ನೇಮಕಾತಿ ಪ್ರಾಧಿಕಾರವು ರೋಸ್ಟರ್ (ಮೀಸಲಾತಿ) ಪದ್ಧತಿ ಒಲಿಸುವಂತೆ ಕಟ್ಟುನಿಟ್ಟಿನ ಸೂಚನೆ ಇರುತ್ತದೆ. ಆದರೆ ಪ್ರಸ್ತಾಪಿತ ಅರ್ಜಿದಾರರು ಸಾಮಾನ್ಯ ವರ್ಗದವರಾಗಿರುತ್ತಾರೆ. ವಾಸ್ತವವಾಗಿ ಜಿಲ್ಲಾಧಿಕಾರಿ ಗಳಿಗೆ "ಸಿ" ವೃಂದ ಮತ್ತು "ಡಿ" ವೃಂದದ ಹುದ್ದೆಗೆ ನೇರ ನೇಮಕಾತಿಯ ಅಧಿಕಾರ ಇರುವುದಿಲ್ಲ. ಈ ಮಧ್ಯೆ ಅರ್ಜಿದಾರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಸಂ. 4272/04 ಪ್ರಕರಣವನ್ನು ದಾಖಲಿಸಿ

ರುತ್ತಾರೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿ ಬಿಡುಗಡೆಯಾದ ಅನುದಾನ

887 (402) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವೆಷ್ಟು?

ಆ) ಪ್ರತಿ ವರ್ಷ ಬಿಡುಗಡೆಯಾದ ಅನುದಾನವೆಷ್ಟು?

ಇ) ಈ ಯೋಜನೆಯಡಿಯಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು? ಗುರಿ ಎಷ್ಟು? ಸಾಧಿಸಿದ ಪ್ರಮಾಣ, ಬಾಕಿ ಉಳಿದವು ಯಾವುವು (ಪೂರ್ಣ ವಿವರ ನೀಡುವುದು)?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಆ ಸಂಬಂಧದ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಮಂಜೂರಾದ ಅನುದಾನ	
	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ
2007–08	5.90	6.27
2008–09	15.28	8.56
2009–10	18.90	10.37

ಆ) ಆ ಸಂಬಂಧದ ವಿವರ ಈ ಕೆಳಗಿನಂತಿದೆ.

ವರ್ಷ	(ರೂ. ಲಕ್ಷಗಳಲ್ಲಿ)	
	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ
2007–08	5.90	6.27
2008–09	15.28	8.56
2009–10	18.90	10.37